# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

**ಪಾಠ-: 1. ಜಗತ್ತಿನ ಪ್ರಮುಖ ಘಟನೆಗಳು, 9. ಶಾಸಕಾಂಗ ಕಾರ್ಯಾಂಗ ನ್ಯಾಯಾಂಗ, 12. ಭಾರತದ ಪ್ರಾಕೃತಿಕ ವಿಭಾಗಗಳು**

**ತರಗತಿ: 7ನೇ ವಿಷಯ: ಸಮಾಜ ವಿಜ್ಞಾನ ಅಂಕಗಳು : 20 ಸಮಯ : 45 ನಿಮಿಷ**

---

**I. ಸೂಕ್ತ ಉತ್ತರ ಆರಿಸಿ ಬರೆಯಿರಿ (4 x 1 = 4)**

1. ಕ್ರೈಸ್ತ ಧರ್ಮದ ಪರಮ ಗುರುಗಳನ್ನು ಹೀಗೆಂದು ಕರೆಯುತ್ತಾರೆ

ಅ. ಖಲೀಫರು ಆ. ಪೋಪರು ಇ. ಮಹಮ್ಮದರು ಈ. ಪಾದ್ರಿಗಳು

2. ಇಸ್ಲಾಂ ಧರ್ಮವನ್ನು ಸ್ಥಾಪಿಸಿದವರು

ಅ. ಏಸುಕ್ರಿಸ್ತ ಆ. ಮಹಮ್ಮದ್ ಪೈಗಂಬರ್ ಇ. ದಲೈಲಾಮಾ ಈ. ಖಲೀಫರು

3. ಸರ್ಕಾರದ ಮೊದಲನೆಯ ಅಂಗ

ಅ. ಕಾರ್ಯಾಂಗ ಆ. ಶಾಸಕಾಂಗ ಇ. ಮಾಧ್ಯಮ ಈ. ನ್ಯಾಯಾಂಗ

4. ಪ್ರಪಂಚದಲ್ಲೇ ಎತ್ತರವಾದ ಶಿಖರ ಮೌಂಟ್ ಎವರೆಸ್ಟ್ ಆದರೆ, ಭಾರತದಲ್ಲಿ ಎತ್ತರವಾದ ಶಿಖರ ಯಾವುದು?

ಅ. ಮೌಂಟ್ ಗಾಡ್ವಿನ್ ಆಸ್ಟಿನ್ ಆ. ತ್ರಿಶೂಲ ಶಿಖರ ಇ. ಚೌಕಂಬಾ ಶಿಖರ ಈ. ರಿಮೋ ಶಿಖರ

**II. ಹೊಂದಿಸಿ ಬರೆಯಿರಿ (4 x 1 = 4)**

5. ಪೂರ್ವಕ್ಕೆ - ಅ. ಅರಬ್ಬಿ ಸಮುದ್ರ

6. ಪಶ್ಚಿಮಕ್ಕೆ - ಆ. ಹಿಮಾಲಯ ಪರ್ವತ

7. ದಕ್ಷಿಣಕ್ಕೆ - ಇ. ಬಂಗಾಳಕೊಲ್ಲಿ

8. ಉತ್ತರಕ್ಕೆ - ಈ. ಹಿಂದೂ ಮಹಾಸಾಗರ

**III. ಒಂದು ವಾಕ್ಯದಲ್ಲಿ ಉತ್ತರಿಸಿ (2 x 1 = 2)**

9. ಶಾಸಕಾಂಗ ಎಂದರೇನು?

10. ಕರ್ನಾಟಕದ ಹೆಬ್ಬಾಗಿಲು ಎಂದು ಕರೆಯಲ್ಪಡುವ ಬಂದರು ಯಾವುದು?

**IV. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ (3 x 2 = 6)**

11. ಸರ್ಕಾರದ ಮೂರು ಅಂಗಗಳು ಯಾವವು?

12. ಯೇಸುವಿನ ಬೋಧನೆಗಳು ಯಾವುವು?

13. ದ್ವಿಸದನ ಶಾಸಕಾಂಗ ಎಂದರೇನು? ದ್ವಿಸದನ ಶಾಸಕಾಂಗ ಹೊಂದಿರುವ ಎರಡು ದೇಶಗಳನ್ನು ಹೆಸರಿಸಿ.

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ (1 x 4 = 4)**

14. ಇಸ್ಲಾಮಿನ ಐದು ಆಧಾರ ಸ್ತಂಭಗಳು ಯಾವುವು? ವಿವರಿಸಿ.

# ಉತ್ತರ ಪತ್ರಿಕೆ

---

1. ಆ. ಪೋಪರು

2. ಆ. ಮಹಮ್ಮದ್ ಪೈಗಂಬರ್

3. ಆ. ಶಾಸಕಾಂಗ

4. ಅ. ಮೌಂಟ್ ಗಾಡ್ವಿನ್ ಆಸ್ಟಿನ್

5. ಪೂರ್ವಕ್ಕೆ - ಇ. ಬಂಗಾಳಕೊಲ್ಲಿ

6. ಪಶ್ಚಿಮಕ್ಕೆ - ಅ. ಅರಬ್ಬಿ ಸಮುದ್ರ

7. ದಕ್ಷಿಣಕ್ಕೆ - ಈ. ಹಿಂದೂ ಮಹಾಸಾಗರ

8. ಉತ್ತರಕ್ಕೆ - ಆ. ಹಿಮಾಲಯ ಪರ್ವತ

9. ರಾಷ್ಟ್ರಕ್ಕೆ ಬೇಕಾದ ಶಾಸನ ಅಥವಾ ಕಾನೂನುಗಳನ್ನು ರಚಿಸುವ ಸರ್ಕಾರದ ಅಂಗವೇ ಶಾಸಕಾಂಗ.

10. ನವ ಮಂಗಳೂರು.

11. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ.

12. ನಾವೆಲ್ಲ ದೇವರ ಮಕ್ಕಳು; ನಾವೆಲ್ಲ ಸಹೋದರರು ಎಂದು ಯೇಸು ಸಾರಿ ಹೇಳಿದರು.

• ಪಾಪಗಳನ್ನು ಮಾಡದೆ ಶುದ್ಧ ಜೀವನ ನಡೆಸಬೇಕೆಂದು ಬೋಧಿಸಿದರು. “ನಿಮ್ಮ ನೆರೆಯವರನ್ನು ನಿಮ್ಮಂತೆ ಪ್ರೀತಿಸಿ” .ಮಾನವ ಸೇವೆಯೇ ದೇವರ ಸೇವೆ ಎಂದರು..

13. ಎರಡು ಸದನಗಳನ್ನು ಹೊಂದಿರುವ ಶಾಸಕಾಂಗವನ್ನು ದ್ವಿಸದನ ಶಾಸಕಾಂಗ ಎನ್ನುವರು. ಉದಾಹರಣೆಗೆ: ಭಾರತ ಮತ್ತು ಇಂಗ್ಲೆಂಡ್.

14. ಇಸ್ಲಾಮಿನ ಐದು ಆಧಾರ ಸ್ತಂಭಗಳು:

1) ಕಲಿಮಾ: ಅಲ್ಲಾನಲ್ಲಿ ನಂಬಿಕೆ.

2) ನಮಾಜ್: ದಿನಕ್ಕೆ 5 ಬಾರಿ ಪ್ರಾರ್ಥನೆ.

3) ರೋಜಾ: ರಂಜಾನ್ ತಿಂಗಳಲ್ಲಿ ಉಪವಾಸ.

4) ಜಕಾತ್: ಬಡವರಿಗೆ ದಾನ ನೀಡುವುದು.

5) ಹಜ್: ಜೀವಿತಾವಧಿಯಲ್ಲಿ ಒಮ್ಮೆಯಾದರೂ ಮೆಕ್ಕಾ ಯಾತ್ರೆ ಮಾಡುವುದು.

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

**ಪಾಠ-: 2. ಮಧ್ಯಯುಗದ ಯುರೋಪ್, 10. ಕೇಂದ್ರ ಸರ್ಕಾರ, 13. ಉತ್ತರ ಅಮೆರಿಕ ಖಂಡ**

**ತರಗತಿ: 7ನೇ ವಿಷಯ: ಸಮಾಜ ವಿಜ್ಞಾನ ಅಂಕಗಳು : 20 ಸಮಯ : 45 ನಿಮಿಷ**

---

**I. ಸೂಕ್ತ ಉತ್ತರ ಆರಿಸಿ ಬರೆಯಿರಿ (4 x 1 = 4)**

1. ಮುದ್ರಣ ಯಂತ್ರವನ್ನು ಕಂಡುಹಿಡಿದ ಜರ್ಮನಿಯ ವಿಜ್ಞಾನಿ

ಅ. ಜಾನ್ ರೈಟ್ ಆ. ಜಾನ್ ಗುಟೆನ್ ಬರ್ಗ್ ಇ. ಮಾರ್ಕೋನಿ ಈ. ವಿಲಿಯಂ ಹಾರ್ವೆ

2. ಲೋಕಸಭೆಯ ಸದಸ್ಯರ ಗರಿಷ್ಠ ಸಂಖ್ಯೆ

ಅ. 225 ಆ. 75 ಇ. 552 ಈ. 250

3. ಪ್ರಪಂಚದ ಗೋಧಿಯ ಕಣಜ ಅಥವಾ ರೊಟ್ಟಿಯ ಬುಟ್ಟಿ ಎಂದು ಕರೆಯಲಾಗುವ ಪ್ರದೇಶ

ಅ. ಸ್ಟೆಪ್ಪಿಸ್ ಮೈದಾನಗಳು ಆ. ಪ್ರೈರೀಸ್ ಇ. ಡೌನ್ಸ್ ಮೈದಾನಗಳು ಈ. ಪಂಪಾಸ್

4. ಭಾರತ ಗಣರಾಜ್ಯದ ಅತ್ಯುನ್ನತ ಅಧಿಕಾರಿ

ಅ. ಪ್ರಧಾನಮಂತ್ರಿ ಆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಇ. ರಾಷ್ಟ್ರಪತಿ ಈ. ಉಪರಾಷ್ಟ್ರಪತಿ

**II. ಹೊಂದಿಸಿ ಬರೆಯಿರಿ (4 x 1 = 4)**

| | | |
|---|---|---|
| 5. ಡಾಂಟೆ | - | ಅ. ಡೆಕಾಮೆರಾನ್ |
| 6. ಬೊಕಾಷಿಯೊ | - | ಆ. 5 ವರ್ಷ |
| 7. ಲೋಕಸಭೆಯ ಅಧಿಕಾರಾವಧಿ | - | ಇ. ಕೆಳಮನೆ |
| 8. ಲೋಕಸಭೆ | - | ಈ. ದ ಡಿವೈನ್ ಕಾಮಿಡಿ |

**III. ಒಂದು ವಾಕ್ಯದಲ್ಲಿ ಉತ್ತರಿಸಿ (2 x 1 = 2)**

9. ಕೇಂದ್ರ ಶಾಸಕಾಂಗವನ್ನು ಏನೆಂದು ಕರೆಯುತ್ತೇವೆ?

10. ಜಗತ್ತಿನ ಅತಿದೊಡ್ಡ ದ್ವೀಪ ಯಾವುದು?

**IV. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ (3 x 2 = 6)**

11. ಸಂಸತ್ತಿನ ಎರಡು ಸದನಗಳು ಯಾವುವು?

12. ಉತ್ತರ ಅಮೆರಿಕದ ಪ್ರಮುಖ ಸರೋವರಗಳನ್ನು ಪಟ್ಟಿ ಮಾಡಿರಿ.

13. ಪುನರುಜ್ಜೀವನಕ್ಕೆ ಕಾರಣಗಳಾದ ಎರಡು ಪ್ರಮುಖ ಅಂಶಗಳನ್ನು ತಿಳಿಸಿ.

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ (1 x 4 = 4)**

14. ಭಾರತದ ರಾಷ್ಟ್ರಪತಿಗಳ ಅಧಿಕಾರಗಳನ್ನು ತಿಳಿಸಿ.

# ಉತ್ತರ ಪತ್ರಿಕೆ

---

1. ಆ. ಜಾನ್ ಗುಟೆನ್ ಬರ್ಗ್

2. ಇ. 552

3. ಆ. ಪ್ಯಾರೀಸ್

4. ಇ. ರಾಷ್ಟ್ರಪತಿ

5. ಡಾಂಟೆ - ಈ. ದ ಡಿವೈನ್ ಕಾಮಿಡಿ

6. ಬೊಕಾಷಿಯೊ - ಅ. ಡೆಕಾಮೆರಾನ್

7. ಲೋಕಸಭೆಯ ಅಧಿಕಾರಾವಧಿ - ಆ. 5 ವರ್ಷ

8. ಲೋಕಸಭೆ - ಇ. ಕೆಳಮನೆ

9. ಕೇಂದ್ರ ಶಾಸಕಾಂಗವನ್ನು ಸಂಸತ್ತು (ಪಾರ್ಲಿಮೆಂಟ್) ಎಂದು ಕರೆಯುತ್ತೇವೆ.

10. ಗ್ರೀನ್ ಲ್ಯಾಂಡ್.

11. ಲೋಕಸಭೆ (ಕೆಳಮನೆ) ಮತ್ತು ರಾಜ್ಯಸಭೆ (ಮೇಲ್ಮನೆ).

12. ಸುಪೀರಿಯರ್, ಮಿಚಿಗನ್, ಹುರಾನ್, ಇರಿ ಮತ್ತು ಒಂಟಾರಿಯೋ.

13. 1453ರಲ್ಲಿ ಟರ್ಕರು ಕಾನ್ ಸ್ಟಂಟಿನೋಪಲ್ ನಗರವನ್ನು ಆಕ್ರಮಣ ಮಾಡಿದ್ದು ಮತ್ತು ಭೌಗೋಳಿಕ ಅನ್ವೇಷಣೆಗಳು, ಮುದ್ರಣ ಯಂತ್ರದ ಆವಿಷ್ಕಾರ ಪುನರುಜ್ಜಿವನಕ್ಕೆ ಕಾರಣವಾದವು.

14. ರಾಷ್ಟ್ರಪತಿಗಳು ಭಾರತದ ಪ್ರಥಮ ಪ್ರಜೆಯಾಗಿದ್ದು ಕಾರ್ಯಾಂಗದ ಮುಖ್ಯಸ್ಥರಾಗಿರುತ್ತಾರೆ. ಅವರು ಪ್ರಧಾನಮಂತ್ರಿ ಮತ್ತು ಮಂತ್ರಿಮಂಡಳವನ್ನು ನೇಮಿಸುತ್ತಾರೆ. ಸಂಸತ್ತು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕುವ ಅಧಿಕಾರ ಹೊಂದಿದ್ದಾರೆ. ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನ್ಯಾಯಾಧೀಶರು, ರಾಜ್ಯಪಾಲರು ಮುಂತಾದ ಉನ್ನತ ಅಧಿಕಾರಿಗಳನ್ನು ನೇಮಿಸುವ ಅಧಿಕಾರವನ್ನು ರಾಷ್ಟ್ರಪತಿಗಳು ಹೊಂದಿದ್ದಾರೆ.

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

**ಪಾಠ-: 3. ಭಾರತಕ್ಕೆ ಐರೋಪ್ಯರ ಆಗಮನ, 4. 18ನೇ ಶತಮಾನದ ಭಾರತ, 5. ಬ್ರಿಟಿಷ್ ಪ್ರಾಬಲ್ಯದ ಬೆಳವಣಿಗೆ**

**ತರಗತಿ: 7ನೇ ವಿಷಯ: ಸಮಾಜ ವಿಜ್ಞಾನ ಅಂಕಗಳು : 20 ಸಮಯ : 45 ನಿಮಿಷ**

---

**I. ಸೂಕ್ತ ಉತ್ತರ ಆರಿಸಿ ಬರೆಯಿರಿ (4 x 1 = 4)**

1. ವಾಸ್ಕೋಡಿಗಾಮನು ಭಾರತಕ್ಕೆ ಹೊಸ ಜಲ ಮಾರ್ಗವನ್ನು ಕಂಡು ಹಿಡಿದ ವರ್ಷ ಮತ್ತು ದಿನಾಂಕ…………

ಅ. 1498 ಮೇ 17 ಆ. 1498 ಮೇ 16 ಇ. 1516 ಮೇ 18 ಈ. 1600 ಮೇ 20

2. ಆರ್ಕಾಟ್ ಈ ಪ್ರದೇಶದ ರಾಜಧಾನಿ ಆಗಿತ್ತು……….

ಅ. ಮೈಸೂರು ಆ. ಬಂಗಾಳ ಇ. ಮದ್ರಾಸ್ ಈ. ಕರ್ನಾಟಕ

3. ಬಕ್ಸಾರ್ ಕದನ ಸಾ.ಶ ಈ ವರ್ಷದಲ್ಲಿ ನಡೆಯಿತು……… ಅ. 1757 ಆ. 1764 ಇ. 1765 ಈ. 1799

4. ಸಹಾಯಕ ಸೈನಿಕ ಪದ್ಧತಿಯನ್ನು ಜಾರಿಗೆ ತಂದ ಗವರ್ನರ್ ಜನರಲ್

ಅ. ಲಾರ್ಡ್ ಕಾರ್ನ್ ವಾಲೀಸ್ ಆ. ಲಾರ್ಡ್ ಡಾಲ್ ಹೌಸಿ

ಇ. ಲಾರ್ಡ್ ವೆಲ್ಲೆಸ್ಲಿ ಈ. ಲಾರ್ಡ್ ಕ್ಯಾನಿಂಗ್

**II. ಹೊಂದಿಸಿ ಬರೆಯಿರಿ (4 x 1 = 4)**

5. ಪೋರ್ಚುಗೀಸರು - ಅ. ಪಾಂಡಿಚೇರಿ

6. ಬ್ರಿಟಿಷರು - ಆ. ಕಲ್ಕತ್ತಾ

7. ಡಚ್ಚರು - ಇ. ಗೋವಾ

8. ಫ್ರೆಂಚರು - ಈ. ಪುಲಿಕಾಟ್

**III. ಒಂದು ವಾಕ್ಯದಲ್ಲಿ ಉತ್ತರಿಸಿ (2 x 1 = 2)**

9. ದಸ್ತಕಗಳು ಎಂದರೇನು?

10. ಮರಾಠ ರಾಜನ ಪ್ರಧಾನ ಮಂತ್ರಿಯನ್ನು ಏನೆಂದು ಕರೆಯುತ್ತಿದ್ದರು?

**IV. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ (3 x 2 = 6)**

11. ಬಕ್ಸಾರ ಕದನದ ಫಲಿತಾಂಶಗಳಾವುವು?

12. ಮೂರನೇ ಪಾಣಿಪತ್ ಕಾಳಗ ಯಾರ ನಡುವೆ ನಡೆಯಿತು?

13. ಪ್ಲಾಸಿ ಕದನಕ್ಕೆ ಕಾರಣಗಳು ಯಾವುವು?

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ (1 x 4 = 4)**

14. ಭಾರತದಲ್ಲಿ ಪೋರ್ಚುಗೀಸರ ಅವನತಿಗೆ ಕಾರಣಗಳನ್ನು ಪಟ್ಟಿ ಮಾಡಿರಿ.

# ಉತ್ತರ ಪತ್ರಿಕೆ

---

1. ಅ. 1498 ಮೇ 17

2. ಈ. ಕರ್ನಾಟಕ

3. ಆ. 1764

4. ಇ. ಲಾರ್ಡ್ ವೆಲ್ಲೆಸ್ಲಿ

5. ಪೋರ್ಚುಗೀಸರು - ಇ. ಗೋವಾ

6. ಬ್ರಿಟಿಷರು - ಆ. ಕಲ್ಕತ್ತಾ

7. ಡಚ್ಚರು - ಈ. ಪುಲಿಕಾಟ್

8. ಫ್ರೆಂಚರು - ಅ. ಪಾಂಡಿಚೇರಿ

9. ಬ್ರಿಟಿಷರು ತೆರಿಗೆ ನೀಡದೆ ವ್ಯಾಪಾರ ಮಾಡಲು ಮೊಘಲರಿಂದ ಪಡೆದಿದ್ದ ವಿಶೇಷ ಅನುಮತಿ ಪತ್ರಗಳೇ ದಸ್ತಕಗಳು.

10. ಪೇಶ್ವೆ.

11. ಬಕ್ಸಾರ್ ಕದನದಿಂದ ಬ್ರಿಟಿಷರಿಗೆ ದಿವಾನಿ ಹಕ್ಕು ದೊರೆಯಿತು. ಬಂಗಾಳದ ಮೇಲೆ ಬ್ರಿಟಿಷರ ಸಂಪೂರ್ಣ ಹಿಡಿತ ಸಾಧಿಸಲು ಇದು ಕಾರಣವಾಯಿತು.

12. ಮರಾಠರು ಮತ್ತು ಅಫಘಾನ್ ದಾಳಿಕೋರ ಅಹಮದ್ ಷಾ ಅಬ್ದಾಲಿ ನಡುವೆ ಮೂರನೇ ಪಾಣಿಪತ್ ಕಾಳಗ ನಡೆಯಿತು.

13. ಸಿರಾಜ್ ಉದ್ ದೌಲನ ಅನುಮತಿ ಇಲ್ಲದೆ ಬ್ರಿಟಿಷರು ಕಲ್ಕತ್ತಾದ ಕೋಟೆ ಬಲಪಡಿಸಿದ್ದು ಮತ್ತು ದಸ್ತಕಗಳ ದುರುಪಯೋಗವು ಪ್ಲಾಸಿ ಕದನಕ್ಕೆ ಮುಖ್ಯ ಕಾರಣಗಳಾದವು.

14. 1) ಡಚ್ಚರು ಮತ್ತು ಇಂಗ್ಲೀಷರ ನೌಕಾಪಡೆಗಳು ಪೋರ್ಚುಗೀಸರಿಗಿಂತ ಬಲಿಷ್ಠವಾಗಿದ್ದವು.
    2) ಪೋರ್ಚುಗೀಸರ ಅಧಿಕಾರಿಗಳು ಭ್ರಷ್ಟರಾಗಿದ್ದರು.
    3) ಅನ್ಯ ಧರ್ಮೀಯರನ್ನು ಬಲವಂತವಾಗಿ ಮತಾಂತರಿಸಿದ್ದು ಜನರ ವಿರೋಧಕ್ಕೆ ಕಾರಣವಾಯಿತು.
    4) ವಿಜಯನಗರ ಸಾಮ್ರಾಜ್ಯದ ಅವನತಿಯ ನಂತರ ಇವರ ವ್ಯಾಪಾರ ಕುಂಠಿತವಾಯಿತು.

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

**ಪಾಠ-: 6. ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು, 11. ರಾಜ್ಯ ಸರ್ಕಾರ, 14. ದಕ್ಷಿಣ ಅಮೆರಿಕ ಖಂಡ**

**ತರಗತಿ: 7ನೇ ವಿಷಯ: ಸಮಾಜ ವಿಜ್ಞಾನ ಅಂಕಗಳು : 20 ಸಮಯ : 45 ನಿಮಿಷ**

---

**I. ಸೂಕ್ತ ಉತ್ತರ ಆರಿಸಿ ಬರೆಯಿರಿ (4 x 1 = 4)**

1. ಕಂದಾಯ ವಸೂಲಿಗಾಗಿ ಹರಾಜು ವ್ಯವಸ್ಥೆಯನ್ನು ಜಾರಿಗೆ ತಂದವರು

ಅ. ರಾಬರ್ಟ ಕ್ಲೈವ್ ಆ. ವಾರನ್ ಹೆಸ್ಟಿಂಗ್ಸ್ ಇ. ಲಾರ್ಡ್ ಡಾಲ ಹೌಸಿ ಈ. ಲಾರ್ಡ್ ವೆಲ್ಲೆಸ್ಲಿ

2. ಸುವರ್ಣಸೌಧವಿರುವ ನಗರ……….. ಅ. ಬೆಂಗಳೂರು ಆ. ಧಾರವಾಡ ಇ. ಬೆಳಗಾವಿ ಈ. ಕಲಬುರ್ಗಿ

3. ಪ್ರಪಂಚದ ಅತ್ಯಂತ ಉದ್ದವಾದ ಪರ್ವತ ಸರಣಿ

ಅ. ರಾಕಿ ಪರ್ವತಗಳು ಆ. ಹಿಮಾಲಯ ಪರ್ವತಗಳು

ಇ. ಅಪಲೇಷಿಯನ್ ಪರ್ವತಗಳು ಈ. ಆಂಡೀಸ್ ಪರ್ವತಗಳು

4. ಕರ್ನಾಟಕ ವಿಧಾನಸಭೆಯ ಒಟ್ಟು ಸದಸ್ಯರ ಸಂಖ್ಯೆ

ಅ. 250 ಆ. 75 ಇ. 552 ಈ. 224

**II. ಹೊಂದಿಸಿ ಬರೆಯಿರಿ (4 x 1 = 4)**

5. ಖಾಯಂ ಜಮೀನ್ದಾರಿ ಪದ್ಧತಿ - ಅ. ಮುಖ್ಯಮಂತ್ರಿ

6. ರೈತವಾರಿ ಪದ್ಧತಿ - ಆ. ಲಾರ್ಡ್ ಕಾರ್ನ್ ವಾಲೀಸ್

7. ರಾಜ್ಯ ಸರ್ಕಾರದ ಮುಖ್ಯಸ್ಥ - ಇ. ಸರ್ ಥಾಮಸ್ ಮನ್ರೋ

8. ರಾಜ್ಯದ ಪ್ರಥಮ ಪ್ರಜೆ - ಈ. ರಾಜ್ಯಪಾಲರು

**III. ಒಂದು ವಾಕ್ಯದಲ್ಲಿ ಉತ್ತರಿಸಿ (2 x 1 = 2)**

9. ರೈತವಾರಿ ಪದ್ಧತಿ ಎಂದರೇನು?

10. ದಕ್ಷಿಣ ಅಮೇರಿಕಾದ ನೀಳವಾದ ರಾಷ್ಟ್ರ ಯಾವುದು?

**IV. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ (3 x 2 = 6)**

11. ವಿಧಾನಸಭೆಯ ಅಧಿಕಾರ ಮತ್ತು ಕಾರ್ಯಗಳನ್ನು ತಿಳಿಸಿ.

12. ದಕ್ಷಿಣ ಅಮೇರಿಕಾದ ಪ್ರಮುಖ ಹುಲ್ಲುಗಾವಲುಗಳನ್ನು ತಿಳಿಸಿರಿ.

13. ಭಾರತದಲ್ಲಿ ಸಂಪತ್ತಿನ ಸೋರಿಕೆಯ ಪರಿಣಾಮಗಳೇನು?

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ (1 x 4 = 4)**

14. ಮುಖ್ಯಮಂತ್ರಿಯ ಅಧಿಕಾರ ಮತ್ತು ಕರ್ತವ್ಯಗಳು ಯಾವುವು?

# ಉತ್ತರ ಪತ್ರಿಕೆ

---

1. ಆ. ವಾರನ್ ಹೆಸ್ಟಿಂಗ್ಸ್

2. ಇ. ಬೆಳಗಾವಿ

3. ಈ. ಆಂಡೀಸ್ ಪರ್ವತಗಳು

4. ಈ. 224

5. ಖಾಯಂ ಜಮೀನ್ದಾರಿ ಪದ್ಧತಿ - ಆ. ಲಾರ್ಡ್ ಕಾರ್ನ್ ವಾಲೀಸ್

6. ರೈತವಾರಿ ಪದ್ಧತಿ - ಇ. ಸರ್ ಥಾಮಸ್ ಮನ್ರೋ

7. ರಾಜ್ಯ ಸರ್ಕಾರದ ಮುಖ್ಯಸ್ಥ - ಅ. ಮುಖ್ಯಮಂತ್ರಿ

8. ರಾಜ್ಯದ ಪ್ರಥಮ ಪ್ರಜೆ - ಈ. ರಾಜ್ಯಪಾಲರು

9. ಸರ್ಕಾರ ಮತ್ತು ರೈತನ ನಡುವೆ ನೇರ ಸಂಪರ್ಕ ಕಲ್ಪಿಸಿ, ರೈತನೇ ನೇರವಾಗಿ ಕಂದಾಯ ಕಟ್ಟುವ ಪದ್ಧತಿಯನ್ನು ರೈತವಾರಿ ಪದ್ಧತಿ ಎನ್ನುವರು.

10. ಚಿಲಿ.

11. ರಾಜ್ಯಕ್ಕೆ ಬೇಕಾದ ಶಾಸನಗಳನ್ನು ರಚಿಸುವುದು, ಹಣಕಾಸು ನಿಯಂತ್ರಣ ಮಾಡುವುದು ಮತ್ತು ಕಾರ್ಯಾಂಗದ ಮೇಲೆ ನಿಯಂತ್ರಣ ಸಾಧಿಸುವುದು ವಿಧಾನಸಭೆಯ ಕಾರ್ಯಗಳಾಗಿವೆ.

12. ಸೆಲ್ವಾಸ್ (ಸಮಭಾಜಕ ವೃತ್ತದ ಕಾಡುಗಳು), ಲಾನೋಸ್, ಕ್ಯಾಂಪಾಸ್ ಮತ್ತು ಪಂಪಾಸ್ ಮುಂತಾದ ಹುಲ್ಲುಗಾವಲುಗಳಿವೆ.

13. ಬ್ರಿಟಿಷರ ಆರ್ಥಿಕ ನೀತಿಗಳಿಂದ ಭಾರತದ ಸಂಪತ್ತು ಇಂಗ್ಲೆಂಡಿಗೆ ಹರಿಯಿತು. ಇದರಿಂದ ಭಾರತದಲ್ಲಿ ಬಡತನ, ಹಸಿವು ಮತ್ತು ನಿರುದ್ಯೋಗ ಹೆಚ್ಚಾಯಿತು ಹಾಗೂ ದೇಶಿ ಕೈಗಾರಿಕೆಗಳು ನಾಶವಾದವು.

14. ಮುಖ್ಯಮಂತ್ರಿಯು ರಾಜ್ಯ ಸರ್ಕಾರದ ನೈಜ ಮುಖ್ಯಸ್ಥರಾಗಿರುತ್ತಾರೆ. ಅವರು ರಾಜ್ಯಪಾಲರಿಗೆ ಮಂತ್ರಿಮಂಡಳವನ್ನು ರಚಿಸಲು ಸಲಹೆ ನೀಡುತ್ತಾರೆ. ಮಂತ್ರಿಗಳಿಗೆ ಖಾತೆಗಳನ್ನು ಹಂಚುವುದು ಮತ್ತು ಸರ್ಕಾರದ ಎಲ್ಲಾ ಇಲಾಖೆಗಳ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡುವುದು ಮುಖ್ಯಮಂತ್ರಿಯ ಪ್ರಮುಖ ಕರ್ತವ್ಯಗಳಾಗಿವೆ.

# ಪಾಠಾಧಾರಿತ(LBA) ಪ್ರಶ್ನೆ ಪತ್ರಿಕೆ 2026-27

**ಪಾಠ-: 7. ಮೈಸೂರು ಮತ್ತು ಇತರ ಸಂಸ್ಥಾನಗಳು, 8. ಭಕ್ತಿ ಪಂಥ ಹಾಗೂ ಸೂಫಿ ಪರಂಪರೆ**

**ತರಗತಿ: 7ನೇ ವಿಷಯ: ಸಮಾಜ ವಿಜ್ಞಾನ ಅಂಕಗಳು : 20 ಸಮಯ : 45 ನಿಮಿಷ**

---

**I. ಸೂಕ್ತ ಉತ್ತರ ಆರಿಸಿ ಬರೆಯಿರಿ (4 x 1 = 4)**

1. ಮೈಸೂರು ರಾಜ್ಯದ ಲಾಂಛನ

ಅ. ವರಾಹ ಆ. ಗಂಡ ಬೇರುಂಡ ಇ. ನಾಲ್ಕು ಮುಖವುಳ್ಳ ಸಿಂಹ ಈ. ಸಳ

2. 'ನವಕೋಟಿ ನಾರಾಯಣ' ಎಂಬ ಬಿರುದನ್ನು ಪಡೆದವರು

ಅ. ನಾಲ್ವಡಿ ಕೃಷ್ಣರಾಜ ಒಡೆಯರು ಆ. ಚಿಕ್ಕ ದೇವರಾಜ ಒಡೆಯರು

ಇ. ಜಯ ಚಾಮರಾಜ ಒಡೆಯರು ಈ. ಮದಕರಿ ನಾಯಕ

3. ಕರ್ನಾಟಕದ ಸಂಗೀತ ಪಿತಾಮಹ

ಅ. ಕನಕದಾಸರು ಆ. ತ್ಯಾಗರಾಜರು ಇ. ಶಿಶುನಾಳ ಶರೀಫರು ಈ. ಪುರಂದರದಾಸರು

4. 'ದಾಸರೆಂದರೆ ಪುರಂದರದಾಸರಯ್ಯ' ಎಂದು ಪುರಂದರದಾಸರನ್ನು ಹೊಗಳಿದವರು ಯಾರು?

ಅ. ಕನಕದಾಸರು ಆ. ಬಸವಣ್ಣ ಇ. ವ್ಯಾಸರಾಯರು ಈ. ಮಧ್ವಾಚಾರ್ಯರು

**II. ಹೊಂದಿಸಿ ಬರೆಯಿರಿ (4 x 1 = 4)**

5. ಸರ್ ಎಂ ವಿಶ್ವೇಶ್ವರಯ್ಯ - ಅ. ಆದಿಕೇಶವ

6. ಕನಕದಾಸರ ಅಂಕಿತನಾಮ - ಆ. ಚಿತ್ರದುರ್ಗ

7. ಶಿಶುನಾಳ ಶರೀಫರ ಗುರುಗಳು - ಇ. ಆಧುನಿಕ ಮೈಸೂರಿನ ಶಿಲ್ಪಿ

8. ಮದಕರಿ ನಾಯಕ - ಈ. ಗೋವಿಂದಭಟ್ಟರು

**III. ಒಂದು ವಾಕ್ಯದಲ್ಲಿ ಉತ್ತರಿಸಿ (2 x 1 = 2)**

9. ಕಬೀರ್ ದಾಸರ ತಂದೆ ತಾಯಿ ಯಾರು?

10. ಮೈಸೂರು ಸಂಸ್ಥಾನವನ್ನು ಗಾಂಧೀಜಿಯವರು ಏನೆಂದು ಬಣ್ಣಿಸಿದರು?

**IV. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ (3 x 2 = 6)**

11. ಹೈದರಾಲಿಯ ಸಾಧನೆಗಳು ಯಾವುವು?

12. ಭಕ್ತಿ ಪಂಥದ ಸಾರ ಬರೆಯಿರಿ?

13. ಕೆಳದಿಯ ರಾಣಿ ಚೆನ್ನಮ್ಮಾಜಿ ಕುರಿತು ಬರೆಯಿರಿ.

**V. ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ (1 x 4 = 4)**

14. 'ಸರ್ ಎಂ ವಿಶ್ವೇಶ್ವರಯ್ಯ ರವರು ಆಧುನಿಕ ಮೈಸೂರಿನ ಶಿಲ್ಪಿ' ಸಮರ್ಥಿಸಿ.

# ಉತ್ತರ ಪತ್ರಿಕೆ

---

1. ಆ. ಗಂಡ ಬೇರುಂಡ
2. ಆ. ಚಿಕ್ಕ ದೇವರಾಜ ಒಡೆಯರು
3. ಈ. ಪುರಂದರದಾಸರು
4. ಇ. ವ್ಯಾಸರಾಯರು
5. ಸರ್ ಎಂ ವಿಶ್ವೇಶ್ವರಯ್ಯ - ಇ. ಆಧುನಿಕ ಮೈಸೂರಿನ ಶಿಲ್ಪಿ
6. ಕನಕದಾಸರ ಅಂಕಿತನಾಮ - ಅ. ಆದಿಕೇಶವ
7. ಶಿಶುನಾಳ ಶರೀಫರ ಗುರುಗಳು - ಈ. ಗೋವಿಂದಭಟ್ಟರು
8. ಮದಕರಿ ನಾಯಕ - ಆ. ಚಿತ್ರದುರ್ಗ
9. ನೀರು ಮತ್ತು ನೀಮಾ.
10. ರಾಮರಾಜ್ಯ.
11. ಹೈದರಾಲಿಯು ಬಲಿಷ್ಠ ಸೈನ್ಯವನ್ನು ಕಟ್ಟಿ ಮೈಸೂರು ರಾಜ್ಯವನ್ನು ವಿಸ್ತರಿಸಿದನು. ಆಂಗ್ಲೋ-ಮೈಸೂರು ಯುದ್ಧಗಳಲ್ಲಿ ಬ್ರಿಟಿಷರಿಗೆ ತೀವ್ರ ಪ್ರತಿರೋಧ ಒಡ್ಡಿದನು.
12. ಭಕ್ತಿ ಪಂಥವು ಮೇಲು-ಕೀಳು ಮತ್ತು ಜಾತಿಭೇದವನ್ನು ಖಂಡಿಸಿ ಸಮಾನತೆಯನ್ನು ಸಾರಿತು. ದೇವರೊಬ್ಬನೇ ನಾಮ ಹಲವು, ಧರ್ಮ ಎಂದರೆ ಪ್ರೇಮ ಮತ್ತು ಮಾನವ ಸೇವೆ ಎಂದು ಬೋಧಿಸಿತು.
13. ಕೆಳದಿ ಚೆನ್ನಮ್ಮಾಜಿಯು ಶೌರ್ಯ ಮತ್ತು ತ್ಯಾಗಕ್ಕೆ ಹೆಸರಾಗಿದ್ದಳು. ಮೊಘಲರನ್ನು ಹಿಮ್ಮೆಟ್ಟಿಸಿ ಶಿವಾಜಿಯ ಮಗ ರಾಜಾರಾಮನಿಗೆ ರಕ್ಷಣೆ ನೀಡಿದ ದಿಟ್ಟ ಮಹಿಳೆಯಾಗಿದ್ದಳು.
14. ಸರ್ ಎಂ. ವಿಶ್ವೇಶ್ವರಯ್ಯನವರು 'ಕೈಗಾರೀಕರಣ ಇಲ್ಲವೇ ವಿನಾಶ' ಎಂಬ ಮಂತ್ರದೊಂದಿಗೆ ಭದ್ರಾವತಿಯಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಸಾಬೂನು ಮತ್ತು ಗಂಧದ ಎಣ್ಣೆ ಕಾರ್ಖಾನೆಗಳನ್ನು ಸ್ಥಾಪಿಸಿದರು. ಕೃಷ್ಣರಾಜಸಾಗರ (KRS) ಆಣೆಕಟ್ಟು ನಿರ್ಮಿಸಿದರು. 1913ರಲ್ಲಿ ಮೈಸೂರು ಬ್ಯಾಂಕ್ ಮತ್ತು 1916ರಲ್ಲಿ ಮೈಸೂರು ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರು. ಇವರ ಈ ಬಹುಮುಖಿ ಕೊಡುಗೆಗಳಿಂದ ಇವರನ್ನು 'ಆಧುನಿಕ ಮೈಸೂರಿನ ಶಿಲ್ಪಿ' ಎಂದು ಕರೆಯಲಾಗುತ್ತದೆ.

# ಕೊಡುಗೆ:

## ಜಿಪಿಟಿ ಶಿಕ್ಷಕರ ಶೈಕ್ಷಣಿಕ ಸಂಪನ್ಮೂಲಗಳು,ಉತ್ತರ ಕನ್ನಡ

( https://chandugokarna-bit.github.io/gpt-teachers-resources/# )